Akashvani: Bangalore
National Bulletin In Kannada
03.10.2026: 7.35AM
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
03.10.2026: 7.35AM
**********

**ಮುಖ್ಯಾಂಶಗಳು:**

1. ಜಾಗತಿಕ ವ್ಯಾಪಾರದಲ್ಲಿನ ಅಸಾಧಾರಣ ಬೆಳವಣಿಗೆಗಳ ತಡೆಗೆ ಡಬ್ಲ್ಯೂ ಟಿಒ ನಿಯಮಗಳ ಪಾಲನೆಗೆ ಭಾರತ ಕರೆ
2. ವೈದ್ಯಕೀಯ ಕ್ಷೇತ್ರಕ್ಕೆ ರೋಬೋಟಿಕ್ಸ್, ಎಐ ಹಾಗೂ ನ್ಯಾನೋ ವಿಜ್ಞಾನ ದಿಕ್ಸೂಚಿ - ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್
3. ಜಿ-೭ ರಾಷ್ಟ್ರಗಳಿಂದ ೧೦೦ ದಶಲಕ್ಷ ಬ್ಯಾರೆಲ್ ತೈಲ ಬಿಡುಗಡೆಗೆ ನಿರ್ಧಾರ
4. ಭಾರತ ಸರ್ಕಾರದಿಂದ ಅನುಮೋದಿತ ಹಸಿರು ಇಂಧನ ಕಾರಿಡಾರ್ ಕುರಿತು ವಿಶ್ವಸಂಸ್ಥೆ ಶ್ಲಾಘನೆ
5. ಏಷ್ಯನ್ ಗೇಮ್ಸ್ ಮಹಿಳಾ ರಿಕರ್ವ್ ಬಿಲ್ಲುಗಾರಿಕೆ ಸ್ಪರ್ಧೆ; ವಿಶ್ವ ಚಾಂಪಿಯನ್ ಆಟಗಾರ್ತಿಯನ್ನು ಮಣಿಸಿ, ಸೆಮಿಫೈನಲ್ ಪ್ರವೇಶಿಸಿದ ಕುಂಕುಮ್ ಮೊಹೊದ್

**********

ಜಾಗತಿಕ ವ್ಯಾಪಾರದಲ್ಲಿನ ಅಸಾಧಾರಣ ಬೆಳವಣಿಗೆಗಳನ್ನು ಸರಿಪಡಿಸಲು ವಿಶ್ವ ವ್ಯಾಪಾರ ಸಂಸ್ಥೆ - ಡಬ್ಲ್ಯೂ ಟಿಒನ ನಿಯಮಗಳಿಗೆ ಬದ್ಧವಾದ ವಿಧಾನವನ್ನು ಅನುಸರಿಸಲು ಭಾರತ ಕರೆ ನೀಡಿದೆ. ಅಮೆರಿಕದ ಮಿಲ್ವಾಕಿಯಲ್ಲಿ ನಡೆದ ಜಿ-೨೦ ವಾಣಿಜ್ಯ ಸಚಿವರ ಸಭೆಯ ಸಮಾರೋಪ ದಿನದ ಅಧಿವೇಶನದಲ್ಲಿ ಮಾತನಾಡಿದ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ಸಬ್ಸಿಡಿಗಳ ಮೂಲಕ ಒಂದೇ ಪ್ರದೇಶದಲ್ಲಿ ಉತ್ಪಾದನೆ ಕೇಂದ್ರೀಕೃತಗೊಳ್ಳುವುದು ವ್ಯಾಪಾರ ವ್ಯತ್ಯಯಕ್ಕೆ ಕಾರಣವಾಗುತ್ತದೆಯೇ ಹೊರತು, ಕೈಗಾರಿಕಾ ಸಾಮರ್ಥ್ಯವಲ್ಲ. ಪೂರೈಕೆ ಸರಪಳಿಯ ವೈವಿಧ್ಯೀಕರಣದ ನೆಪದಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಕೈಗಾರಿಕರಣದ ಹಕ್ಕನ್ನು ಕಸಿದುಕೊಳ್ಳಬಾರದು ಎಂದು ಆಗ್ರಹಿಸಿದರು. ಭಾರತ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದ್ದು, ಜಾಗತಿಕ ಪೂರೈಕೆ ಸರಪಳಿಯಲ್ಲಿ ವಿಶ್ವಾಸಾರ್ಹ ಕೊಂಡಿಯಾಗಿ ಹೊರಹೊಮ್ಮುತ್ತಿದೆ. ನಿಯಮ ಆಧಾರಿತ, ಪಾರದರ್ಶಕ ಹಾಗೂ ತಾರತಮ್ಯರಹಿತ ಬಹು ವಿಧ

ವ್ಯಾಪಾರ ವ್ಯವಸ್ಥೆಗೆ ಭಾರತ ಬದ್ಧವಾಗಿದೆ ಎಂದು ಪುನರುಚ್ಛರಿಸಿದರು. ಸಭೆಯ ಹಿನ್ನೆಲೆಯಲ್ಲಿ ಸಚಿವರು ಆಸ್ಟ್ರೇಲಿಯಾ, ಸೌದಿ ಅರೆಬಿಯಾ ಮತ್ತು ದಕ್ಷಿಣ ಕೊರಿಯಾದ ಸಚಿವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು.

**********

ರೋಗ ನಿರ್ಣಯ, ಚಿಕಿತ್ಸೆ ಹಾಗೂ ಪುನಶ್ಚೇತನ ಸೇರಿದಂತೆ ವೈದ್ಯಕೀಯ ಕ್ಷೇತ್ರದ ಎಲ್ಲಾ ವಿಭಾಗಗಳಲ್ಲಿ ರೋಬೋಟಿಕ್ಸ್ ತಂತ್ರಜ್ಞಾನ ಪ್ರಮುಖ ಸಾಧನವಾಗಿ ಹೊರಹೊಮ್ಮಲಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ಆಯೋಜಿಸಲಾಗಿದ್ದ ರೋಬೋಟಿಕ್ಸ್ ಶಸ್ತ್ರ ಚಿಕಿತ್ಸಾ ಸಂಘದ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ರೋಬೋಟಿಕ್ಸ್, ಕೃತಕಬುದ್ಧಿಮತ್ತೆ ಹಾಗೂ ನ್ಯಾನೋ ವಿಜ್ಞಾನ ತಂತ್ರಜ್ಞಾನಗಳ ಸಮ್ಮಿಲನ, ನಿಖರ ಮತ್ತು ಸೂಕ್ತ ಆರೋಗ್ಯ ರಕ್ಷಣಾ ವ್ಯವಸ್ಥೆಗೆ ಸದೃಢ ಅಡಿಪಾಯ ಹಾಕಲಿದೆ ಎಂದರು. ಜಿನೋಮ್ ಇಂಡಿಯಾ ಯೋಜನೆ ಕುರಿತು ಮಾತನಾಡಿದ ಸಚಿವರು, ಈಗಾಗಲೇ ಹತ್ತು ಸಾವಿರ ವ್ಯಕ್ತಿಗಳ ಜೀನ್ ಸೀಕ್ವೆನ್ಸಿಂಗ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಭವಿಷ್ಯದಲ್ಲಿ ಪ್ರತಿಯೊಬ್ಬ ನವಜಾತ ಮಗುವಿನ ಜೀನ್ ಸೀಕ್ವೆನ್ಸಿಂಗ್ ಮಾಡುವ ಹಂತಕ್ಕೆ ತಂತ್ರಜ್ಞಾನ ತಲುಪಲಿದೆ ಎಂದು ಹೇಳಿದ್ದಾರೆ.

**********

ಏರಿಕೆಯಾಗುತ್ತಿರುವ ಇಂಧನ ದರಗಳನ್ನು ತಗ್ಗಿಸುವ ಉದ್ದೇಶದಿಂದ ನಾಲ್ಕು ತಿಂಗಳ ಅವಧಿಯಲ್ಲಿ ೧೦೦ ದಶಲಕ್ಷ ಬ್ಯಾರೆಲ್ ತೈಲವನ್ನು ಬಿಡುಗಡೆ ಮಾಡಲು ಜಿ-೭ ರಾಷ್ಟ್ರಗಳು ಒಪ್ಪಿಕೊಂಡಿವೆ. ಮೊದಲ ೨೦ ದಿನಗಳಲ್ಲಿ ಗಣನೀಯ ಪ್ರಮಾಣದ ಡೀಸೆಲ್‌ನ್ನು ಬಿಡುಗಡೆ ಮಾಡಲು ಯೋಜಿಸಲಾಗಿದೆ. ಅಮೆರಿಕದಲ್ಲಿ ಡೀಸೆಲ್ ಬೆಲೆ ದಾಖಲೆಯ ಮಟ್ಟಕ್ಕೆ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ನವೆಂಬರ್‌ನಲ್ಲಿ ನಡೆಯಲಿರುವ ಮಧ್ಯಂತರ ಚುನಾವಣೆಗಳ ಮುನ್ನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಅವರ ಆಡಳಿತದ ಮೇಲೆ ಇದು ಒತ್ತಡ ಹೆಚ್ಚಿಸಿದೆ. ಯುರೋಪ್ ರಾಷ್ಟ್ರಗಳು ತಮ್ಮ ಸಂಗ್ರಹದಿಂದ ಹೆಚ್ಚಿನ ಪ್ರಮಾಣದ ಡೀಸೆಲ್ ಬಿಡುಗಡೆಗೆ ಒಪ್ಪಿಕೊಂಡಿದ್ದು, ಪ್ರಕ್ರಿಯೆ ತಕ್ಷಣ ಆರಂಭವಾಗಲಿದೆ ಎಂದು ಅಧ್ಯಕ್ಷ ಟ್ರಂಪ್ ತಿಳಿಸಿದ್ದಾರೆ. ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರೋನ್ ಅವರೊಂದಿಗೆ ನಡೆದ ದೂರವಾಣಿ ಮಾತುಕತೆಯ ಬಳಿಕ ಈ ಘೋಷಣೆ ಮಾಡಲಾಗಿದೆ. ಅಂತಾರಾಷ್ಟ್ರೀಯ ಇಂಧನ ಸಂಸ್ಥೆ ಈ ತೈಲ

ಬಿಡುಗಡೆ ಪ್ರಕ್ರಿಯೆಯನ್ನು ಸಮನ್ವಯಗೊಳಿಸಲಿದೆ ಎಂದು ಫ್ರಾನ್ಸ್ ತಿಳಿಸಿದೆ. ಇರಾನ್ ಒಳಗೊಂಡ ಎಂಟು ತಿಂಗಳ ಸಂಘರ್ಷದ ಹಿನ್ನೆಲೆಯಲ್ಲಿ ಅಮೆರಿಕ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಇಂಧನ ಬೆಲೆ ಏರಿಕೆಯಾಗಿರುವ ಸಂದರ್ಭದಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

**********

ಭಾರತ ಸರ್ಕಾರ ೧.೮೯ ಲಕ್ಷ ಕೋಟಿ ರೂಪಾಯಿ ವೆಚ್ಚದ ಹಸಿರು ಇಂಧನ ಕಾರಿಡಾರ್ ಹಂತ-೩ ಯೋಜನೆಗೆ ಅನುಮೋದನೆ ನೀಡಿರುವುದನ್ನು ವಿಶ್ವಸಂಸ್ಥೆ ಶ್ಲಾಘಿಸಿದೆ. ಈ ಬೃಹತ್ ಯೋಜನೆ ದೇಶದ ಆರ್ಥಿಕತೆಗೆ ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಪ್ರಯೋಜನ ನೀಡಲಿದೆ ಎಂದು ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಕಾರ್ಯಕಾರಿ ಕಾರ್ಯದರ್ಶಿ ಸೈಮನ್ ಸ್ಟೀಲ್ ಬಣ್ಣಿಸಿದ್ದಾರೆ. ಈ ಯೋಜನೆ ಭಾರತದ ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು ಹೆಚ್ಚಿಸಿ, ಬ್ಯಾಟರಿ ಸಂಗ್ರಹಣಾ ವ್ಯವಸ್ಥೆ ಹಾಗೂ ವಿದ್ಯುತ್ ಗ್ರಿಡ್‌ಗಳನ್ನು ಬಲಪಡಿಸಲಿದೆ. ಇದರಿಂದ ತಯಾರಿಕೆ ಹಾಗೂ ಇಂಧನ ಕ್ಷೇತ್ರದಲ್ಲಿ ಬೃಹತ್ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಕೇಂದ್ರ ಸಂಪುಟ ಈ ಯೋಜನೆಗೆ ಒಟ್ಟು ಒಂದು ಲಕ್ಷ ೮೯ ಸಾವಿರದ ೪೦೫ ಕೋಟಿ ರೂಪಾಯಿಗಳನ್ನು ಕಾಯ್ದಿರಿಸಿದ್ದು, ಇದರಲ್ಲಿ ೫೪ ಸಾವಿರದ ೮೨ ಕೋಟಿ ರೂಪಾಯಿಗಳನ್ನು ಕೇಂದ್ರದ ಆರ್ಥಿಕ ನೆರವಿನ ರೂಪದಲ್ಲಿ ಒದಗಿಸಲಿದೆ.

**********

ಕರ್ನಾಟಕದಲ್ಲಿ ತೀವ್ರವಾಗಿ ಬಾಧಿಸಿರುವ ಬರ ಪರಿಸ್ಥಿತಿ ಪರಿಶೀಲಿಸಲು ಕೇಂದ್ರ ಸರ್ಕಾರದ ಉನ್ನತಮಟ್ಟದ ಅಧಿಕಾರಿಗಳ ಅಧ್ಯಯನ ತಂಡ ಇಂದಿನಿಂದ ೪ ದಿನಗಳ ಕಾಲ ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಲಿದೆ. ಕೃಷಿ ಇಲಾಖೆಯ ಜಂಟಿ ಕಾರ್ಯದರ್ಶಿ ಅಜಿತ್ ಕುಮಾರ್ ಸಾಹು ನೇತೃತ್ವದ ೧೦ ಸದಸ್ಯರ ತಂಡ ರಾಜ್ಯಕ್ಕೆ ಆಗಮಿಸುತ್ತಿದ್ದು, ಇಂದಿನಿಂದ ಇದೇ ೯ರವರೆಗೆ ಪ್ರವಾಸ ಕೈಗೊಳ್ಳಲಿದೆ. ಮೊದಲನೇ ತಂಡ ತುಮಕೂರು, ದಾವಣಗೆರೆ ಮತ್ತು ವಿಜಯನಗರ ಜಿಲ್ಲೆ, ಎರಡನೇ ತಂಡ ಹಾಸನ, ಮೈಸೂರು, ಚಾಮರಾಜನಗರ, ಮತ್ತು ಮಂಡ್ಯ ಜಿಲ್ಲೆಯಲ್ಲಿ ವಸ್ತುಸ್ಥಿತಿ ಅಧ್ಯಯನ ಮಾಡಲಿದೆ. ಮೂರನೇ ತಂಡ ಯಾದಗಿರಿ, ರಾಯಚೂರು, ಬಾಗಲಕೋಟೆ, ಕೊಪ್ಪಳ ಜಿಲ್ಲೆಗಳಲ್ಲಿ ಬರ ಅಧ್ಯಯನ ಕೈಗೊಳ್ಳಲಿದೆ.

**********

ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ದೇಶಾದ್ಯಂತ, ಜನ ಸೇವೆಯಿಂದ ದೇಶ ಸೇವೆ ಎಂಬ ಅಭಿಯಾನ ನಡೆಯುತ್ತಿದೆ. ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ ಸಾಗರಮಾಲಾ ಯೋಜನೆ ಕುರಿತ ಒಂದು ವರದಿ ಇಲ್ಲಿದೆ. ಭಾರತದ ಸುದೀರ್ಘ ಕರಾವಳಿ ತೀರವನ್ನು ದೇಶದ ಆರ್ಥಿಕ ಪ್ರಗತಿಯ ಚಾಲಕ ಶಕ್ತಿಯಾಗಿ ಪರಿವರ್ತಿಸುವ ಉದ್ದೇಶದಿಂದ ೨೦೧೫ರಲ್ಲಿ ಚಾಲನೆ ನೀಡಲಾದ 'ಸಾಗರಮಾಲಾ ಯೋಜನೆ'ಯು ಬಂದರುಗಳನ್ನು ಉತ್ಪಾದನಾ ಕೇಂದ್ರಗಳು, ಮಾರುಕಟ್ಟೆಗಳು ಹಾಗೂ ಸಾರ್ವಜನಿಕರೊಂದಿಗೆ ಯಶಸ್ವಿಯಾಗಿ ಸಂಪರ್ಕಿಸುತ್ತಿದೆ. ಬಂದರುಗಳ ಆಧುನೀಕರಣ, ಸುಸಜ್ಜಿತ ರಸ್ತೆ ಮತ್ತು ರೈಲು ಸಂಪರ್ಕ, ಬಂದರು ಆಧಾರಿತ ಕೈಗಾರೀಕರಣ, ಕರಾವಳಿ ಸಮುದಾಯಗಳ ಅಭಿವೃದ್ಧಿ ಹಾಗೂ ಕರಾವಳಿ ಹಡಗು ಸಾರಿಗೆ ಮತ್ತು ಒಳನಾಡು ಜಲಮಾರ್ಗಗಳ ಬಳಕೆ, ಈ ಐದು ಪ್ರಮುಖ ಸ್ತಂಭಗಳ ಆಧಾರದ ಮೇಲೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸಾಗರಮಾಲಾ ಯೋಜನೆಯಡಿ ಇದುವರೆಗೆ ೭.೦೭ ಲಕ್ಷ ಕೋಟಿ ರೂಪಾಯಿ ಮೌಲ್ಯದ ೮೪೫ಕ್ಕೂ ಹೆಚ್ಚು ಯೋಜನೆಗಳನ್ನು ಗುರುತಿಸಲಾಗಿದ್ದು, ಈ ಪೈಕಿ ೩೧೫ ಯೋಜನೆಗಳು ಈಗಾಗಲೇ ಯಶಸ್ವಿಯಾಗಿ ಪೂರ್ಣಗೊಂಡಿವೆ. ಯೋಜನೆಯ ಪರಿಣಾಮವಾಗಿ ಪ್ರಮುಖ ಬಂದರುಗಳಲ್ಲಿ ಹಡಗುಗಳ ತಂಗುವಿಕೆ ಮತ್ತು ನಿರ್ವಹಣಾ ಅವಧಿಯು ೨೦೧೪ರಲ್ಲಿ ಇದ್ದ ೯೬ ಗಂಟೆಗಳಿಂದ ೨೦೨೫ರ ವೇಳೆಗೆ ಸುಮಾರು ೪೯ ಗಂಟೆಗಳಿಗೆ ಗಮನಾರ್ಹವಾಗಿ ಇಳಿಕೆಯಾಗಿದೆ. ಪ್ರಸ್ತುತ ಜಾಗತಿಕ ಮಟ್ಟದ ಅಗ್ರ ೧೦೦ ಬಂದರುಗಳ ಪಟ್ಟಿಯಲ್ಲಿ ಭಾರತದ ಒಂಬತ್ತು ಬಂದರುಗಳು ಸ್ಥಾನ ಪಡೆದುಕೊಂಡಿದ್ದು, ಕರಾವಳಿ ಸರಕು ಸಾರಿಗೆಯಲ್ಲೂ ಬೃಹತ್ ಪ್ರಗತಿ ಕಂಡುಬಂದಿದೆ.

**********

ಭಾರತ ಮತ್ತು ಕೆನಡಾ ನಡುವಿನ ಮುಂದಿನ ಸುತ್ತಿನ ವ್ಯಾಪಾರ ಮಾತುಕತೆಗಳು ಅಕ್ಟೋಬರ್ ೫ರಂದು ಪುನರಾರಂಭಗೊಳ್ಳಲಿವೆ. ವರ್ಷದ ಅಂತ್ಯದೊಳಗೆ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸುವ ನಿಟ್ಟಿನಲ್ಲಿ ಎರಡೂ ದೇಶಗಳು ಮಾತುಕತೆಗಳನ್ನು ತ್ವರಿತಗೊಳಿಸುತ್ತಿವೆ ಎಂದು ಕೆನಡಾದ ಅಂತಾರಾಷ್ಟ್ರೀಯ ವ್ಯಾಪಾರ ಸಚಿವ ಮನಿಂದರ್ ಸಿಧು ತಿಳಿಸಿದ್ದಾರೆ.

ಅಮೆರಿಕದ ಮಿಲ್ವಾಕಿಯಲ್ಲಿ ನಡೆದ ಜಿ-೨೦ ವ್ಯಾಪಾರ ಸಚಿವರ ಸಭೆಯ ಹಿನ್ನೆಲೆಯಲ್ಲಿ

ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರನ್ನು ಸಿಧು ಭೇಟಿಯಾಗಿ ಮಾತುಕತೆ ನಡೆಸಿದ್ದರು. ಮುಂಬೈನಲ್ಲಿ ನಾಲ್ಕನೇ ಸುತ್ತಿನ ಮಾತುಕತೆ ಪೂರ್ಣಗೊಂಡ ಬಳಿಕ ಅಕ್ಟೋಬರ್ ೫ರಿಂದ ಮುಂದಿನ ಸುತ್ತು ಆರಂಭವಾಗಲಿದೆ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಅವರು ತಿಳಿಸಿದ್ದಾರೆ. ಪ್ರಸ್ತುತ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ೩೦ ಶತಕೋಟಿ ಡಾಲರ್‌ಗಿಂತ ಹೆಚ್ಚಿದ್ದು, ೨೦೩೦ರ ವೇಳೆಗೆ ಇದನ್ನು ೭೦ ಶತಕೋಟಿ ಡಾಲರ್‌ಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಈ ನಡುವೆ, ಈ ತಿಂಗಳು ಸುಮಾರು ೩೦೦ ಪ್ರತಿನಿಧಿಗಳನ್ನು ಒಳಗೊಂಡ ಕೆನಡಾದ ವ್ಯಾಪಾರ ನಿಯೋಗ ಭಾರತಕ್ಕೆ ಭೇಟಿ ನೀಡಲಿದೆ. ಖನಿಜ ಸಂಪನ್ಮೂಲಗಳು, ಇಂಧನ, ಕೃಷಿ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಭಾಗಿತ್ವ ಹಾಗೂ ಹೂಡಿಕೆ ಅವಕಾಶಗಳನ್ನು ಅನ್ವೇಷಿಸುವುದು ನಿಯೋಗದ ಉದ್ದೇಶವಾಗಿದೆ.

**********

ಜಪಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್‌ನ ಮಹಿಳಾ ರಿಕರ್ವ್ ವೈಯಕ್ತಿಕ ಬಿಲ್ಲುಗಾರಿಕೆ ಸ್ಪರ್ಧೆಯಲ್ಲಿ ಭಾರತದ ಉದಯೋನ್ಮುಖ ಬಿಲ್ಲುಗಾರ್ತಿ ಕುಂಕುಮ್ ಮೋಹೋದ್ ಅಚ್ಚರಿಯ ಪ್ರದರ್ಶನ ನೀಡಿದ್ದು, ಇಂದು ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ವಿಶ್ವ ಚಾಂಪಿಯನ್ ಹಾಗೂ ಟೋಕಿಯೋ ಒಲಿಂಪಿಕ್ಸ್ ಚಿನ್ನದ ವಿಜೇತೆ ದಕ್ಷಿಣ ಕೊರಿಯಾದ ಕಾಂಗ್ ಚೆಯಂಗ್ ಅವರನ್ನು ೬-೪ ಅಂತರದಿಂದ ಮಣಿಸಿ, ಸೆಮಿಫೈನಲ್ ಪ್ರವೇಶಿಸಿದ್ದಾರೆ. ಶ್ರೇಯಾಂಕ ಸುತ್ತಿನಲ್ಲಿ ಅಗ್ರ ಸ್ಥಾನದಲ್ಲಿದ್ದ ಕಾಂಗ್ ಅವರು, ಪದಕ ಗೆಲ್ಲುವ ನೆಚ್ಚಿನ ಸ್ಪರ್ಧಿಯಾಗಿದ್ದರು. ಭಾರತದ ಕುಂಕುಮ್, ಈ ಅಗ್ರ ಶ್ರೇಯಾಂಕಿತ ಆಟಗಾರ್ತಿಯ ವಿರುದ್ಧ ಉತ್ತಮ ಮಾನಸಿಕ ಸ್ಥಿರತೆ ಕಾಯ್ದುಕೊಂಡು, ಅದ್ಭುತ ಪ್ರದರ್ಶನ ನೀಡಿದರು.

**********

ಜಾಗತಿಕ ತೋಟಗಾರಿಕಾ ಕೇಂದ್ರವು ತೋಟಗಾರಿಕಾ ಕ್ಷೇತ್ರವನ್ನು ಬಲಪಡಿಸುವುದರ ಜೊತೆಗೆ ಆಂಧ್ರಪ್ರದೇಶದ ರಾಯಲಸೀಮಾ ಪ್ರದೇಶದ ರೈತರಿಗೆ ಉತ್ತಮ ಅವಕಾಶಗಳನ್ನು ಸೃಷ್ಟಿಸಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

*********